೧೧. ಬೆಳಗಾವಿ ನಗರ ಸಭೆಯನ್ನು ರದ್ದುಗೊಳಿಸಂವ ಬಗ್ಗೆ

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ನಗರ ಸಭೆಯನ್ನು ರದ್ದು ಮಾಡಲು ಪರಿಶೀಲಿಸಲಾಗುವುದು ಎಂದು ಈಗಾಗಲೇ ತಿಳಿಸಿದ್ದಾರೆ. ಇಷ್ಟು ದಿವಸಗಳಾದರೂ ರದ್ದತಿಯ ಬಗ್ಗೆ ಸರ್ಕಾರ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬುದು ನಮಗೆ ತಿಳಿದುಬಂದಿಲ್ಲ. ಈಗಾಗಲೇ ಬೆಳಗಾವಿ ನಗರ ಹೋರಾಟ ಸಮಿತಿಯವರು ಬೆಳಗಾವಿ ನಗರಸಭೆ ಮಂತ್ರಿಗೆ ಕಾರ್ಯಕ್ರಮ ನವನ್ನು ಹಾಕಿಕೊಂಡಿದ್ದಾರೆ. ಬೆಳಗಾವಿ ನಗರಸಭೆಯನ್ನು ಆದಷ್ಟು ಬೇಗ ರದ್ದುಪಡಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ. ಬೆಳಗಾವಿ ನಗರಸಭೆಯನ್ನು ಯಾವಾಗ ರದ್ದು ಪಡಿಸುತ್ತೀರಾ ಎಂಬುದನ್ನು ಖಚಿತವಾಗಿ ತಿಳಿಸಿ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಬೆಳಗಾವಿ ನಗರಸಭೆಯನ್ನು ರದ್ದುಮಾಡಬೇಕಾದರೆ ಯಾವ ಯಾವ ಕಾರ್ಯಕ್ರಮಗಳನ್ನು ಅನುಸರಿಸಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಸಭೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಆ ನಗರ ಸಭೆಯವರು ಯಾವ ಕಾರ್ಯಕ್ರಮಂ ಗಳನ್ನು ಮಾಡಬೇಕೋ ಅದನ್ನು ಬಿಟ್ಟು ಬೇರೆ ಕೆಲಸಗಳಿಗೆ ಕೈಹಾಕಿದಾಗ, ಅಂಥ ಸಂದರ್ಭದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ವಿಳಂಬವಾದರೆ ಮಹಾರಾಷ್ಟ್ರ ಏಕೀಕರಣ ಸಮಿತಿ ಯವರು ಬೆಳಗಾಮ್ ನಗರಸಭೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ.

ಶಾಸನ ರಚನೆಯಂ ಕಾರ್ಯಕಲಾಪಗಳು

೧ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ (ಆರ್ಜನೆ ಮಂತ್ತು ವರ್ಗಾವಣೆ) ವಿಧೇಯಕ, 1986.

ಪರ್ಯಾಲೋಚನಾ ಪ್ರಸ್ತಾವ

(ಮುಂದುವರಿದ ಚರ್ಚೆ)

† ಶ್ರೀ ಎಂ. ವೀರೂಪ್ಪ ಮೊಯಿಲಿ. (ಕಾರ್ಕಳ.)—ಮಾನ್ಯ ಅಧ್ಯಕ್ಷರೇ, ಮೊನ್ನೆ ಈ ಮನೆಯಲ್ಲಿ ಮಾತನಾಡುತ್ತಿರುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಏತಕ್ಕೆಂದರೆ ತಾವು ಏನು ಮಸೂದೆಯನ್ನು ಮಂಡಿಸಿದ್ದೀರಿ ಅದರ ಬಗ್ಗೆ ಸರ್ಕಾರ ಅದರ ಹಿಂದೆ ಇರತಕ್ಕಂಥ ಉದ್ದೇಶವನ್ನು ಪ್ರಸ್ತಾಪ ಮಾಡಿದ್ದರೆ ಒಳ್ಳೆಯದಿತ್ತು ಎಂದು ಹೇಳಿದ್ದೆ. ಅದಕ್ಕೆ ಸನ್ಮಾನ್ಯ ಬೊಮ್ಮಾಯಿಯವರು ಒಂದೆರಡು ಮಾತುಗಳನ್ನು ಹೇಳಿದ್ದರು. ಅವರು ಒಂದೆರಡು ವಾಕ್ಯದಲ್ಲಿ ಹೇಳಿದ್ದನ್ನು ಪುನಃ ವಿವರವಾಗಿ ಹೇಳುತ್ತಾರೆ ಎನ್ನುವ ಭಾವನೆಯಿಂದ ಇದ್ದೆ. ಆದರೆ ಅವರು ಹೇಳಿದಂತೆ ಕಾಣಲಿಲ್ಲ. ಮೂಲಭೂತವಾದಂಥ ಕೆಲವು ಸಿದ್ಧಾಂತಗಳು ಇದರಲ್ಲಿ ಬರುತ್ತದೆ. ಅದನ್ನು ಪುನಃ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಈವತ್ತು ಏನು ಒಂದು ಹೊಸ ಮಸೂದೆಯನ್ನು ತಂದಿದ್ದಾರೆ ಆ ಮಸೂದೆ ಇಲ್ಲಿ ತರತಕ್ಕಂಥ ಅವಶ್ಯಕತೆ ಇತ್ತೇ ಎನ್ನುವ ಪ್ರಶ್ನೆ ಕೂಡ ಉದ್ಭವವಾಗಿಂತ್ತದೆ. ಏತಕ್ಕೆಂದರೆ ತಮಗೆ ನೆನಪಿರಬಹುದು, ಇದೇ ಸದನದಲ್ಲಿ Karnataka Relief Special Provisions Act 1977 ಎಂದು ಹೇಳಿ ಒಂದು ಮಸೂದೆಯನ್ನು ಪಾಸ್ ಮಾಡಿದ್ದೇವೆ. ಅದನ್ನು ಏತಕ್ಕೆ ಪಾಸ್ ಮಾಡಿದೆವು ಎಂದು ಹೇಳಿದರೆ, ಕೆಲವು ಖಾಸಗಿ ಕೈಗಾರಿಕೆಗಳು ಏನು ಇರುತ್ತವೆ ಅದರಲ್ಲಿ ಸರ್ಕಾರದ ಪಾಲು ಬಂಡವಾಳ ಕೆಲವು ಅಂಶ ಇರಬಹುದು, ಅಥವಾ ಇಲ್ಲದೆ ಇರಬಹುದು. ಆವರು ಏನು ಮಾಡುತ್ತಾರೆಂದರೆ ಲಾಭದ ಅಂಶವನ್ನು ಪಡೆದುಕೊಂಡು ಅಲ್ಲಿರತಕ್ಕಂಥ ಸಿಬ್ಬಂದಿಗಳನ್ನು ಬೀದಿಪಾಲು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.